# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

_______________________ **ವಲಯ-ಕಲ್ಯಾಣ ವಿಭಾಗ**

ಅಭ್ಯರ್ಥಿಯ ಇತ್ತೀಚಿನ ಭಾವ ಚಿತ್ರ ಲಗತ್ತಿಸಬೇಕು

## ಅರ್ಜಿ ನಮೂನೆ

**ವಾರ್ಡ್ ಸಂಖ್ಯೆ ಮತ್ತು ಹೆಸರು:** ____________________

**ಗೆ,**
**ಅಪರ /ಜಂಟಿ ಆಯುಕ್ತರು,**
_________________ ವಲಯ,
________________________,
ಬೆಂಗಳೂರು.

ಕಲ್ಯಾಣ ಕಾರ್ಯಕ್ರಮದ ಯೋಜನೆಯ ಹೆಸರು:_____________________________________

| | |
|---|---|
| 1. ಅಭ್ಯರ್ಥಿಯ ಹೆಸರು ಹಾಗೂ ವಿಳಾಸ (ವಾಸ ದೃಢೀಕರಣ ಲಗತ್ತಿಸಬೇಕು) | |
| 2. ದೂರವಾಣಿ/ಮೊಬೈಲ್ ಸಂಖ್ಯೆ | |
| 3. ತಂದೆ/ಗಂಡನ ಹೆಸರು | |
| 4. ಜನ್ಮ ದಿನಾಂಕ/ವಯಸ್ಸು (ದೃಢೀಕರಣ ನೀಡಬೇಕು) | |
| 5. ವಿದ್ಯಾರ್ಹತೆ (ಪ್ರಮಾಣ ಪತ್ರ ಲಗತ್ತಿಸಬೇಕು) | |
| 6. ಜಾತಿ/ಪ್ರವರ್ಗ (ತಹಸೀಲ್ದಾರ್ ರವರಿಂದ ಪಡೆದ ಗಣಕೀಕೃತ ಜಾತಿ ಪ್ರಮಾಣ ಪತ್ರ ಲಗತ್ತಿಸಬೇಕು) | |
| 7. ಕುಟುಂಬ ವಾರ್ಷಿಕ ಆದಾಯ (ಪ್ರಸಕ್ತ ಸಾಲಿನ ಗಣಕೀಕೃತ ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು) | |
| 8. ಅಂಗವಿಕಲರಾಗಿದ್ದಲ್ಲಿ ಸರ್ಕಾರಿ ವೈದ್ಯರಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸಬೇಕು | |

1. **ಈ ಹಿಂದೆ ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆಗಳಿಂದ ಉಚಿತವಾಗಿ/ಸಾಲದ ಮುಖಾಂತರ ಈ ಮೇಲ್ಕಂಡ ಯೋಜನೆಗೆ ಯಾವುದೇ ಸೌಲಭ್ಯ/ಸವಲತ್ತನ್ನು ಪಡೆದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.**

2. **ಮೇಲ್ಕಂಡ ಎಲ್ಲಾ ಮಾಹಿತಿ ಹಾಗೂ ಲಗತ್ತಿಸಿರುವ ದಾಖಲೆಗಳು ನೈಜ ದಾಖಲೆಗಳೆಂದು ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ನಾನು ಒದಗಿಸಿರುವ ದಾಖಲೆಗಳು ಅಸತ್ಯವೆಂದು ಕಂಡು ಬಂದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡುವ ಯಾವುದೇ ದಂಡನೆಯ ಕ್ರಮಕ್ಕೆ ಬದ್ಧನಾಗಿರುತ್ತೇನೆ.**

ದಿನಾಂಕ: ....................................

ಸ್ಥಳ : ಬೆಂಗಳೂರು. ಅಭ್ಯರ್ಥಿಯ ಸಹಿ................................

***<u>ಯೋಜನೆಗಳನ್ನು ಪಡೆಯಲು ಅಭ್ಯರ್ಥಿಗೆ ಇರಬೇಕಾದ ಅರ್ಹತೆಗಳು ಹಾಗೂ ಮಾನದಂಡಗಳು:-</u>***

1) ಅರ್ಜಿದಾರರು ಆಯಾ ವಲಯ ಕಛೇರಿ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು.
2) ಒಂದು ಕುಟುಂಬದಲ್ಲಿ ಒಂದು ಯೋಜನೆಗೆ ಒಬ್ಬರು ಮಾತ್ರ ಅರ್ಹರಾಗಿರುತ್ತಾರೆ.
3) ಯೋಜನೆಗೆ ನಿಗಧಿಪಡಿಸಿರುವ ಅಭ್ಯರ್ಥಿಗಳ ವಯೋಮಿತಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ 18 ರಿಂದ 40 ವರ್ಷ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರಿಗೆ 18 ರಿಂದ 35 ವರ್ಷ.
4) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ತಹಶೀಲ್ದಾರ್‌ರವರಿಂದ ಗಣಕೀಕೃತ ಜಾತಿ ಪ್ರಮಾಣ ಪತ್ರ (5-ವರ್ಷಗಳ ಅವಧಿಯೊಳಗಿರಬೇಕು) ಹಾಗೂ ಪ್ರಸಕ್ತ ಸಾಲಿನ ರೂ.1.00 ಲಕ್ಷಗಳ ಮಿತಿಗೊಳಪಟ್ಟ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. (ವಿದ್ಯಾಬ್ಯಾಸಕ್ಕೆ ಹೊರತುಪಡಿಸಿ ಇತರೆ ಯೋಜನೆಗಳಿಗೆ ಅಭ್ಯರ್ಥಿಯ ಹೆಸರಿನಲ್ಲಿಯೇ ಜಾತಿ/ಆದಾಯ ಪ್ರಮಾಣ ಪತ್ರ ಇರಬೇಕು)
5) ಹಿಂದುಳಿದ ವರ್ಗದವರು ತಹಶೀಲ್ದಾರ್‌ರವರಿಂದ ಪ್ರಸಕ್ತ ಸಾಲಿನಲ್ಲಿ ಪಡೆದ ಜಾತಿ ಪ್ರಮಾಣ ಪತ್ರ ಮತ್ತು ಸಾಮಾನ್ಯ ಸೌಲಭ್ಯಗಳನ್ನು ಪಡೆಯಲು ರೂ.1.00 ಲಕ್ಷಗಳು ಹಾಗೂ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಪಡೆಯಲು ರೂ.2.00/-ಲಕ್ಷಗಳ ಮಿತಿಗೊಳಪಟ್ಟ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
6) ಅಲ್ಪಸಂಖ್ಯಾತ ವರ್ಗದವರು ತಹಶೀಲ್ದಾರ್‌ರವರಿಂದ ಪ್ರಸಕ್ತ ಸಾಲಿನಲ್ಲಿ ಪಡೆದ ಜಾತಿ ಮತ್ತು ರೂ.2.00 ಲಕ್ಷಗಳ ಮಿತಿಗೊಳಪಟ್ಟ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
7) ವಸತಿ ಸೌಲಭ್ಯ ಯೋಜನೆಗೆ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ನವೀಕರಿಸಿದ ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿದ್ದಲ್ಲಿ ಅಂತಹವರು ಆದಾಯ ಪ್ರಮಾಣ ಪತ್ರ ಸಲ್ಲಿಸುವ ಅಗತ್ಯ ಇರುವುದಿಲ್ಲ.
8) ಅರ್ಜಿದಾರರು ವಯೋಮಿತಿ ಧೃಢೀಕರಿಸಲು ಎಸ್.ಎಸ್.ಎಲ್.ಸಿ ಅಂಕಪಟ್ಟಿ/ಶಾಲಾ-ಕಾಲೇಜಿನ ವರ್ಗಾವಣೆ ಪ್ರಮಾಣ ಪತ್ರ/ಕ್ಯೂಮಿಲೇಟಿವ್ ರೆಕಾರ್ಡ್/ಜನನ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು.
9) ಅಭ್ಯರ್ಥಿಗಳು ಅರ್ಜಿಯೊಂದಿಗೆ 3 ಇತ್ತೀಚಿನ ಭಾವಚಿತ್ರಗಳು, ಯೋಜನೆಗೆ ನಿಗಧಿಪಡಿಸಿದ ವಿದ್ಯಾರ್ಹತೆಯ ದಾಖಲೆಗಳು, ವಾಸ ಸ್ಥಳ ಧೃಢೀಕರಣ ಪತ್ರಗಳಾದ ಮತದಾರರ ಗುರುತಿನ ಚೀಟಿ/ಪಡಿತರ ಚೀಟಿ/ಅಡುಗೆ ಅನಿಲ ರಸೀತಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ಧೃಢೀಕರಣ ಪತ್ರ ಸಲ್ಲಿಸಬೇಕು.
10) ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸುವ ಎಲ್ಲಾ ದಾಖಲೆಗಳನ್ನು (ಜೆರಾಕ್ಸ್ ಪ್ರತಿಗಳನ್ನು) ಗೆಜೆಟೆಡ್ ಅಧಿಕಾರಿಯಿಂದ ಅಥವಾ ನೋಟರಿಯವರಿಂದ ಧೃಢೀಕರಿಸಿ ಸಲ್ಲಿಸಬೇಕು.
11) ಆರ್ಥಿಕ ಸಹಾಯ ಕೋರಿ ಸಲ್ಲಿಸುವ ಅರ್ಜಿದಾರರು ಈ ಹಿಂದೆ ಸರ್ಕಾರ/ಸರ್ಕಾರೇತರ ಸಂಸ್ಥೆಗಳಲ್ಲಿ ಉಚಿತವಾಗಿ/ಸಾಲದ ಮುಖಾಂತರ ಯಾವುದೇ ಸೌಲಭ್ಯ/ಸವಲತ್ತುಗಳನ್ನು ಪಡೆದಿಲ್ಲವೆಂದು ರೂ.20/-ಗಳ ಛಾಪ ಕಾಗದಲ್ಲಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
12) ತರಬೇತಿಗೆ ಕೋರಿ ಸಲ್ಲಿಸುವ ಅರ್ಜಿದಾರರು ತರಬೇತಿಯ ಅವಧಿಯ ಮಧ್ಯದಲ್ಲಿ ಬಿಟ್ಟು ಹೋದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಗುವ ವೆಚ್ಚವನ್ನು ಭರಿಸಲು ಸಿದ್ದನಿರುವೆನೆಂದು ಬಿಳಿ ಹಾಳೆಯಲ್ಲಿ ಮುಚ್ಚಳಿಕೆ ಪತ್ರ ನೀಡಬೇಕು.
13) ವಿವಿಧ ತರಬೇತಿಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳನ್ನು ತರಬೇತಿ ನೀಡುವ ಸಂಸ್ಥೆಗಳಿಗೆ ಪ್ರಾಯೋಜಿಸಲಾಗುವುದು.
14) ಮೇಲ್ಕಂಡಂತೆ ಆಯೋಜಿಸಿರುವ ಕಲ್ಯಾಣ ಕಾರ್ಯಕ್ರಮಗಳಿಗೆ/ಯೋಜನೆಗಳಿಗೆ ಪಾಲಿಕೆಯು ಹೊರಡಿಸಿರುವ ಮಾರ್ಗಸೂಚಿಗಳ ಮಾನದಂಡಗಳನ್ವಯ ಫಲಾನುಭವಿಗಳನ್ನು ಆಯ್ಕೆ ಮಾಡುವುದರಿಂದ ಸೌಲಭ್ಯವನ್ನು ಪಡೆಯಲು ಹೆಚ್ಚಿನ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ ಆಯಾ ವಲಯ ಕಛೇರಿಗಳನ್ನು ಸಂಪರ್ಕಿಸಿ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಅರ್ಜಿಯನ್ನು ಸಲ್ಲಿಸುವುದು.
15) ಸರ್ಕಾರ/ಪಾಲಿಕೆಯು ಆಗಿಂದ್ದಾಗ್ಗೆ ಹೊರಡಿಸುವ ಸುತ್ತೋಲೆ/ಮಾರ್ಗಸೂಚಿಗಳಿಗೆ ಅನುಗುಣವಾಗಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು.

***** ***** ***** ****